## ಪ್ರಯೋಗಶೀಲತೆಯ ಗಂಧವೂ ಇಲ್ಲ

ವಾಣಿಜ್ಯಾತ್ಮಕ ಸಿನಿಮಾಗಳ ಗದ್ದಲವಿಲ್ಲ, ಹಾಗಾದರೆ ಹುಬ್ಬೇರುವಂಥ ಪರ್ಯಾಯ ಸಿನಿಮಾಗಳಾದರೂ ಈ ವರ್ಷ ತಯಾರಾದವಾ ಎಂದು ಕೇಳಿಕೊಂಡರೆ ಗಟ್ಟಿಯಾಗಿ ಹೌದು ಎನ್ನಲು ಸಾಧ್ಯವಿಲ್ಲ. ಮೌನೇಶ ಬಡಿಗೇರ ನಿರ್ದೇಶನದ 'ಸೂಜಿದಾರ', ಪಿ. ಶೇಷಾದ್ರಿ ನಿರ್ದೇಶನದ 'ಮೂಕಜ್ಜಿಯ ಕನಸುಗಳು', ರೂಪಾ ರಾವ್ ನಿರ್ದೇಶನದ 'ಗಂಟುಮೂಟೆ'ಯಂಥ ಸಿನಿಮಾಗಳು ಗಮನಸೆಳೆದರೂ ಹೊಸತನದ ಸ್ಪಷ್ಟ ಮುದ್ರೆಯನ್ನಾಗಲಿ, ಭಿನ್ನ ಜಾಡಿನ ರುಜುವನ್ನಾಗಲಿ ಒತ್ತುವಲ್ಲಿ ಅವು ಪೂರ್ತಿ ಸಫಲವಾಗಲಿಲ್ಲ. ನೆರೆಯ ತಮಿಳು, ಮಲಯಾಳಂ, ಮರಾಠಿ ಚಿತ್ರರಂಗದ ಹೊಸತನದ ಹೊಳಪಿನ ಮುಂದೆ ಚಂದನವನ ಮಂಕಾಗಿಯೇ ಕಾಣುತ್ತಿದೆ.



ಓಹೋ ಎಂದು ಮುಗಿಬೀಳಲಿಲ್ಲ. ಆದರೆ ದರ್ಶನ್ ನಂಬಿ ಹಣ ಹಾಕಿದ್ದ ನಿರ್ಮಾಪಕರಿಗೆ ಮೋಸವನ್ನೂ ಮಾಡಲಿಲ್ಲ. ಲಾಭದ ನಗೆಯನ್ನು ನಿರ್ಮಾಪಕರ ಮುಖದಲ್ಲಿ ಅರಳಿಸಿಯೇ 'ಯಜಮಾನ' ನಿರ್ಗಮಿಸಿದ. ಆರ್. ಚಂದ್ರು ಮತ್ತು ಉಪೇಂದ್ರ ಅಭಿನಯದ 'ಐ ಲವ್ ಯು' ಸಿನಿಮಾ ಬಿಡುಗಡೆಗೂ ಮುನ್ನ ಸೌಂಡು ಮಾಡಿದ್ದೇ ಬಂತು. ಚಿತ್ರರಂಗದಲ್ಲಿ ಪ್ರೇಕ್ಷಕರು ಈ ಲವ್ ಪ್ರಪೋಸಲ್‌ಗಳನ್ನು ಮುಲಾಜಿಲ್ಲದೇ ತಿರಸ್ಕರಿಸಿದರು.

ಈ ವರ್ಷದ ಬಹುನಿರೀಕ್ಷಿತ ಸಿನಿಮಾ ಎಂದೇ ಸುದ್ದಿಯಾಗಿದ್ದ 'ಮುನಿರತ್ನ ಕುರುಕ್ಷೇತ್ರ' ತೆರೆಕಂಡಿದ್ದು ಆಗಸ್ಟ್‌ನಲ್ಲಿ. ತೆಲುಗಿನ 'ಬಾಹುಬಲಿ'ಯನ್ನು ಮೀರಿಸುವ ಸಿನಿಮಾ ಎಂಬ ಹಣೆಪಟ್ಟಿಯನ್ನು ಕಟ್ಟಿಕೊಂಡೇ ಬಂದ ಈ ಸಿನಿಮಾ ಈಗಲೂ ಭರ್ಜರಿ ಗಳಿಕೆ ಮಾಡಿದೆ ಎಂದೇ ಹೇಳಿಕೊಳ್ಳಲಾಗುತ್ತಿದೆ. ಮಾಧ್ಯಮಗಳೂ, ಚಿತ್ರತಂಡ ಕೊಟ್ಟ ಲೆಕ್ಕಾಚಾರಗಳನ್ನು ಜಾಣಕುರುಡಿನಿಂದ ನಂಬಿ ಮೆರೆಸಿವೆ. ಆದರೆ ಚಿತ್ರರಂಗದ ಲೆಕ್ಕಾಚಾರಗಳು ಹತ್ತಿರದಿಂದ ಬಲ್ಲವರು, ಮುನಿರತ್ನ ಮತ್ತು ರಾಕ್‌ಲೈನ್ ವೆಂಕಟೇಶ್ ಅವರ ಖಜಾನೆಯ 'ಕಪ್ಪು' ಕತ್ತಲೆ ಕೋಣೆಯಲ್ಲಿ 'ಬಿಳಿ' ಬೆಳಕು ಮೂಡಿಸಿದ್ದಷ್ಟೇ ಕುರುಕ್ಷೇತ್ರ ಯುದ್ಧದ ಫಲ ಎಂದು ಸಣ್ಣಗಿನ ಧ್ವನಿಯಲ್ಲಿ ಹೇಳುತ್ತಿದ್ದಿದ್ದು ಮಾತ್ರ ಎಲ್ಲೂ ಸುದ್ದಿಯಾಗಲಿಲ್ಲ. ಹಾಗೆ ನೋಡಿದರೆ ಅದ್ದೂರಿ ಸಿನಿಮಾಗಳನ್ನು ಮಾಡುವಲ್ಲಿಯೂ ನಾವೆಷ್ಟು ಹಿಂದಿದ್ದೇವೆ ಎನ್ನುವುದನ್ನು ತೋರಿಸಿದ ಬರ್ಬರ ಸಿನಿಮಾ ಎಂದು ಕುರುಕ್ಷೇತ್ರವನ್ನು ನೆನಪಿಸಿಕೊಳ್ಳಬಹುದು.

ಚಾಲೆಂಜಿಂಗ್ ಸ್ಟಾರ್ ಬೆನ್ನಹಿಂದೆಯೇ ಕಿಚ್ಚ ಕೂಡ 'ಪೈಲ್ವಾನ್' ವೇಷ ತೊಟ್ಟು ಬಂದ. ಸೆಪ್ಟೆಂಬರ್‌ನಲ್ಲಿ ತೆರೆಕಂಡ ಸುದೀಪ್ ಅಭಿನಯದ ಈ ಚಿತ್ರ ಎಂಟು ಭಾಷೆಗಳಲ್ಲಿ ತೆರೆಕಂಡಿತ್ತು. ಆದರೆ ಸಣಕಲು ದೇಹದ ಸುದೀಪ್ ಅವರನ್ನು ಪೈಲ್ವಾನ್ ಎಂದು ಒಪ್ಪಿಕೊಳ್ಳಲು ಪ್ರೇಕ್ಷಕ ಯಾಕೋ ಮನಸ್ಸು ಮಾಡಲಿಲ್ಲ. ಅಲ್ಲದೆ ಚಿತ್ರದೊಟ್ಟಿಗೇ ಪೈರಸಿ ಪ್ರತಿ ಕೂಡ ಬಿಡುಗಡೆಯಾಗಿದ್ದರಿಂದ ಪೈಲ್ವಾನನ ಸೋಲಿಗೆ ಒಂದು ನೆಪವೂ ಸಿಕ್ಕಿತು.

ತಮ್ಮ ವೃತ್ತಿಜೀವನದ ಎರಡನೇ ಇನಿಂಗ್ಸ್‌ನಲ್ಲಿ ಗೆಲುವಿನ ಅಲೆಯಲ್ಲಿ ತೇಲುತ್ತಿರುವ ಶ್ರೀಮುರಳಿ ಮತ್ತು ಹಿಟ್ ಸಿನಿಮಾಗಳ ಸರದಾರ ಚೇತನ್ ಕಾಂಬಿನೇಷನ್‌ನಲ್ಲಿ ರೂಪುಗೊಂಡ 'ಭರಾಟೆ' ಕೂಡ ಹೆಸರಿನಾಚೆ ಭರಾಟೆ ಸೃಷ್ಟಿಸುವುದರಲ್ಲಿ ವಿಫಲವಾಯ್ತು. ಉಸಿರುಗಟ್ಟಿಕೊಂಡು ರೈಮಿ ಡೈಲಾಗ್ಸ್ ಒಪ್ಪಿಸಿ ಶಿಳ್ಳೆ ಹೊಡೆಸುವ ತಂತ್ರ ಈ ಸಲ ಕೈಕೊಟ್ಟಿತು. ಈ ವರ್ಷ ಗಣೇಶ್ ಅಭಿನಯದ ಗಿಮಿಕ್ ಮತ್ತು ಗೀತಾ ಎರಡು ಸಿನಿಮಾಗಳು ಬಿಡುಗಡೆಯಾದರೂ ಅವರಿಗೆ ಮತ್ತೆ ಸೋಲಿನ ಸುಳಿಯನ್ನೇ ಉಳಿಸಿ ಹೋದವು.

ಸ್ಟಾರ್ ಪ್ರಭಾವಳಿ ಇಲ್ಲದೆ, ಹೀರೊಯಿಸಂ ಮುಕ್ಕಾಗದ ಹಾಗೆ ಕಾಪಾಡಬೇಕು ಎಂಬ ಬ್ಯಾಗೇಜುಗಳಿಲ್ಲದೇ ತೆರೆಗೆ ಬಂದ ಡಿಟೆಕ್ಟಿವ್ ದಿವಾಕರನಿಗೆ (ಜಯತೀರ್ಥ ನಿರ್ದೇಶನದ, ರಿಷಭ್ ಶೆಟ್ಟಿ ನಟನೆಯ 'ಬೆಲ್ ಬಾಟಂ') ದಕ್ಕಿದ ನಿಜದ ಗೆಲುವಿನಲ್ಲಿ ಕನ್ನಡ ಚಿತ್ರರಂಗದ ಸ್ಟಾರ್‌ಗಳಿಗೆ ಕಲಿತುಕೊಳ್ಳಲೇಬೇಕಾದ ಹಲವು ಪಾಠಗಳಿವೆ. ನವಿರು ಹಾಸ್ಯದ ಮೂಲಕವೇ ಎಪ್ಪತ್ತರ ದಶಕದ ಕಥೆಯನ್ನು ಭಾವುಕತೆಯ ಲೇಪದೊಂದಿಗೆ ಮುಂದಿಟ್ಟ ಈ ಚಿತ್ರ ಬಿಡುಗಡೆಗೆ ಮುಂಚೆ ಮಾಡಿದಷ್ಟೇ ಸೌಂಡನ್ನು ಚಿತ್ರಮಂದಿರದಲ್ಲೂ ಮಾಡಿದ್ದು ವಿಶೇಷ. ಹೇಮಂತ್ ನಿರ್ದೇಶನದ 'ಕವಲು ದಾರಿ' ಕೂಡ ಚಿತ್ರರಂಗಕ್ಕೆ ಹೊಸ ದೆಸೆಯನ್ನು ತೋರದಿದ್ದರೂ ವಿಭಿನ್ನ ನಿರೂಪಣೆಯಿಂದ ಗಮನ ಸೆಳೆಯಿತು.

## ಡಿಸೆಂಬರ್ ತಿಂಗಳೆಂಬ ನಿರೀಕ್ಷೆಯ ಮೊನೆ

ಪ್ರತಿ ವರ್ಷ ಡಿಸೆಂಬರ್ ಅಂತ್ಯ ಎನ್ನುವುದು ಚಿತ್ರರಂಗದ ಪಾಲಿಗೆ ನಿರೀಕ್ಷೆಯ ತಿಂಗಳಾಗಿರುತ್ತದೆ. ಈ ವರ್ಷವೂ ಈ ತಿಂಗಳಿನ ಮೇಲೆ ವಿಶೇಷ

### ಜಟ್ಟಿ ಬಿದ್ದರೂ...

ಒಂದು ಸಿನಿಮಾ ವಾಣಿಜ್ಯಾತ್ಮಕ ಗೆಲುವನ್ನು ಅಳೆಯುವುದು ಹೇಗೆ? ಗಳಿಕೆಯ ಮೂಲಕ. ಆದರೆ ಆ ಗಳಿಕೆಯ ಲೆಕ್ಕ ಎಷ್ಟು ಪಕ್ಕಾ ಆಗಿರುತ್ತದೆ? ಹೀಗೆ ಲೆಕ್ಕ ಕೊಡುವ ಅಭ್ಯಾಸ ಹೆಚ್ಚಾಗಿ ಕಾಣುವುದು ಸ್ಟಾರ್‌ಗಳ ಸಿನಿಮಾದಲ್ಲಿಯೇ. ಒಂದು ವಾರಕ್ಕೆ ಇಷ್ಟು ಗಳಿಕೆ, ಎರಡು ವಾರಕ್ಕೆ ಇಷ್ಟು ಗಳಿಕೆ ಎಂದೆಲ್ಲ ತುತ್ತೂರಿ ಊದುವ ಚಿತ್ರತಂಡದ ಮಾತನ್ನು ನಂಬಿದರೆ ನಾವು ಬೆಸ್ತು ಬೀಳುವುದು ಖಚಿತ. ಬಿಡುಗಡೆಯಾದ ಮೂರನೇ ದಿನದಿಂದಲೇ ನಿರ್ಮಾಪಕರೇ ಕೈಯಿಂದ ಹಣ ಕಟ್ಟಿ ಸೀಟ್ ಬುಕ್ ಮಾಡುವ ಚಿತ್ರಗಳೂ ಶತದಿನೋತ್ಸವ ಆಚರಿಸಿಕೊಳ್ಳುವ ಹಳೆಯ ವಿದ್ಯಮಾನ ಈಗ ಬಹುತೇಕ ಎಲ್ಲ ಸ್ಟಾರ್ ನಟರ ಸಿನಿಮಾಗಳಿಗೂ ಅಂಟಿಕೊಂಡಿದೆ. ಇದರ ಜೊತೆಗೆ 'ಪಾನ್ ಇಂಡಿಯಾ ರಿಲೀಸ್' ಎಂಬ ಹೊಸ ಭೂತ ಗಾಂಧಿನಗರವನ್ನು ಮೆಟ್ಟಿಕೊಂಡಿದೆ. 'ಪೈಲ್ವಾನ್', 'ಕುರುಕ್ಷೇತ್ರ', 'ಐ ಲವ್ ಯು', 'ದೇವಕಿ' ಹೀಗೆ ಹಲವು ಸಿನಿಮಾಗಳು ಬಹುಭಾಷೆಯಲ್ಲಿ ತೆರೆಕಂಡವು. ಆದರೆ ಕನ್ನಡದಾಚೆ ಈ ಚಿತ್ರಗಳನ್ನು ಯಾರೂ ಕ್ಯಾರೇ ಅನ್ನಲಿಲ್ಲ. ರಕ್ಷಿತ್ ಶೆಟ್ಟಿ 'ಅವನೇ ಶ್ರೀಮನ್ನಾರಾಯಣ' ಸಿನಿಮಾ ಕೂಡ ಐದು ಭಾಷೆಗಳಲ್ಲಿ ತೆರೆಕಾಣುತ್ತಿದೆ. ಅದರ ಭವಿಷ್ಯ ಏನಾಗುವುದೋ ನಾರಾಯಣನೇ ಬಲ್ಲ.